# ಬದುಕ ಬದಲಿಸು

ಬೊಗಸೆಯಕ್ಕಿಗೆ ಚಾಚಿವೆ ಕೈಗಳು ಹತ್ತಾರು
ಯಾರಿಗೆ ಎಷ್ಟು ಪ್ರಭುವೇ
ನೀಡುವವ ನೀನು, ಪಡೆಯುವವರು ನಾವು
ಬಾಳ ಬುತ್ತಿಗೆಷ್ಟೆಷ್ಟು ವಿಭುವೇ.

ಯಾರ‍್ಯಾರ ಬೊಗಸೆಗೆಷ್ಟು ಅನ್ನವೋ
ಮಾಡಿದಾ ನ್ಯಾಯ ನಿನ್ನದೇನೆ
ಏಕಿಂಥ ಅಳಲು, ಬವಣೆ
ಯಾವ ಜನ್ಮದಾ ಪಾಪ ಶಿವನೇ.

ಬಿದ್ದವರು ಎಷ್ಟೋ ಹೋದವರು ಎಷ್ಟೋ
ನರಳಾಟ ಜಗವೆಲ್ಲ ದೊರೆಯೇ
ಏಕಿಂಥ ಸೃಷ್ಟಿ ವ್ಯಾಪಾರ ಇಲ್ಲಿ
ನಿನ್ನಾಟವ ಅರಿಯೆವು ಹರನೇ.

ಕೊಡುವ ಬೊಗಸೆಗಳ ಹೆಚ್ಚಿಸು
ಚಾಚಿದ ಕೈಗಳಿಗೆ ನಿನ್ನ ಬಲವೆ
ಬಡವರ ಬದುಕ ಬದಲಿಸು
ಎಲ್ಲರನು ಸಲಹು ಕರುಣಾಳುವೆ.

● ಎಂ. ಶಾಂತಕುಮಾರಿ



# ಕಿಸಾ ಗೌತಮಿಯ ಹಂಬಲ

ಅರಸುತಿಹುಳು ಕಿಸಾ ಗೌತಮಿ
ತನ್ನ ಮಗನ ಉಳಿಸಿಕೊಳ್ಳಲು
ತಥಾಗತ ಹೇಳಿದ ರೀತಿಯಲ್ಲಿ
ಸಾವಿಲ್ಲದ ಮನೆಯ ಸಾಸಿವೆ ತರಲು

ಆದರೀಗ ಬದಲಾಗಿದೆ ಕಾಲ
ಆದರೂ ತೀರದಿರುವ ಹಂಬಲ
ದೊರಕುವುದೇನು ನನಗೆ
ಸಾಸಿವೆ ಅಲ್ಲದೆ ಹೋದರೂ
ಕೊರೊನಾ ಬಂದಿಲ್ಲದ ಮನೆಯ
ಒಂದು ಹಿಡಿಯಷ್ಟಾದರೂ ಅಕ್ಕಿ
ಎಲ್ಲೆಡೆ ಚಾಚಿದರೂ ಹಸ್ತ
ದೊರೆಯದೇ ಆಗಿಹಳು ಕಕ್ಕಾಬಿಕ್ಕಿ
ಬೊಗಸೆ ತುಂಬಿದ ಅಕ್ಕಿಕಾಳನು
ಚಾಚಿದ ಹತ್ತಾರು ಕೈಗಳಿಗೆ
ಹಂಚಿದ ಬಳಿಕ ಉಳಿದೀತೆ?

ಕೊರೊನಾ ಬಂದಿಲ್ಲದ ಮನೆಯ
ಒಂದಾದರೂ ಅಕ್ಕಿಯ ಕಾಳು
ಆದರಿಂದ ಬರಬಹುದೇನೋ
ಅಗಲಿದ ಸುತನಿಗೆ ಮರಳಿ ಬಾಳು

● ಎಚ್.ಕೆ. ರಾಘವೇಂದ್ರ